(ಇಂದು ದಿನಾಂಕಃ 16-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಬಿ. ಎಸ ವಕೀಲರಿಂದ :**

1. ನನಗೆ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ ಎಂದರೆ ಸರಿ. ನನಗೆ ಸಾಕ್ಷಿ ಕೊಡಲು ಈ ದಿನ ಸುಭಾಷಚಂದ್ರರವರ ಮಗ ದುಡ್ಡು ಕೊಟ್ಟು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನನಗೆ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ ಆದ್ದರಿಂದ ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನಾನು ಓದಿ ನೋಡಿಲ್ಲ ಎಂದರೆ ಸರಿ.ಸುಭಾಷಚಂದ್ರರವರ ತಂದೆ ಗುಂಡಪ್ಪರವರನ್ನು ನಾನು ನೋಡಿರುತ್ತೇನೆ.ಗುಂಡಪ್ಪ ತನ್ನ ಎಲ್ಲಾ ಮಕ್ಕಳ ಮೇಲೆ ಬಹಳ ಜೀವ ಇದ್ದರು ಎಂದರೆ ಸರಿ. ಹಲಚೇರಾಗ್ರಾಮದಲ್ಲಿ ಜಮೀನು ಖರೀದಿ ಮಾಡಿದ್ದರಿಂದ ಗುಂಡಪ್ಪ ಬಂದು ನನ್ನನ್ನು ಭೇಟಿ ಆಗಿ ಹೋಗುತ್ತಿದ್ದರು ಎಂದರೆ ಸರಿ. ಗುಂಡಪ್ಪರವರು ಹಲಚೇರಾ ಗ್ರಾಮದಲ್ಲಿ ಜಮೀನು ಖರೀದಿ ಮಾಡಿದ್ದನಂತರ ಇರಲು ಮನೆ ಬೇಕು ಎಂದು ಸರ್ವೆ ನಂಬರ 119 ರಲ್ಲಿ ಒಂದು ಮನೆ ಕಟ್ಟಿಸಿದ್ದರು ಎಂದರೆ ಸರಿ. ಸುಭಾಷಚಂದ್ರರವರು ಹಿರಿಯ ಮಗನಾಗಿದ್ದು ಅವನು ಮನೆಯಲ್ಲಿ ಜಾಣ ವ್ಯಕ್ತಿ ಆಗಿದ್ದನು ಎಂದರೆ ಸರಿ. ಗುಂಡಪ್ಪರವರು ತಮ್ಮ ಜೀವಿತ ಕಾಲದಲ್ಲಿ ಸುಭಾಷಚಂದ್ರರವರು ಹಿರಿಯ ಮಗನಾಗಿದ್ದು ಅವನು ಮನೆಯಲ್ಲಿ ಜಾಣ ವ್ಯಕ್ತಿ ಆಗಿದ್ದರಿಂದ ಮನೆಯ ಎಲ್ಲಾ ವ್ಯವಹಾರವನ್ನು ಸುಭಾಷ ಚಂದ್ರರವರಿಗೆ ಕೊಟ್ಟಿದ್ದರು ಎಂದರೆ ಸರಿ.

2. ನನ್ನಿಂದ ಜಮೀನು ಖರೀದಿ ಮಾಡುವಾಗ ಗುಂಡಪ್ಪ ಬದುಕಿದ್ದರು ಎಂದರೆ ಸರಿ. ಸುಭಾಷಚಂದ್ರರವರ ತಂದೆ ಗುಂಡಪ್ಪ ನನ್ನಿಂದ ಜಮೀನು ಖರೀದಿ ಮಾಡಿದ ನಂತರವು ಕೂಡ ಸುಭಾಷಚಂದ್ರ ಮತ್ತು ಅವರ ತಂದೆ ನನ್ನ ಹತ್ತಿರ ಬಂದು ಕುಳಿತು ಮಾತನಾಡುತ್ತಿದ್ದರು ಎಂದರೆ

ಸರಿ. ಗುಂಡಪ್ಪರವರು ನನ್ನಿಂದ ಜಮೀನು ಖರೀದಿ ಮಾಡಿದ ನಂತರ ನನ್ನ ಹಾಗೂ ಅವರ ಒಡನಾಟ ಜಾಸ್ತಿ ಆಯಿತು ಎಂದರೆ ಸರಿ.

3. ನನಗೆ ಗೊತ್ತಿದ್ದಂತೆ ಗುಂಡಪ್ಪರವರು ತನ್ನ ಮಕ್ಕಳಿಗೆ ಹೊಲ ಮನೆಯನ್ನು ಹಂಚಿಕೊಟ್ಟಿಲ್ಲ ಎಂದರೆ ಸರಿ. ಸುಭಾಷಚಂದ್ರರವರ ತಂದೆ ಗುಂಡಪ್ಪರವರು ತಾನು ಸತ್ತನಂತರ ಬೇಕಾದರೆ ಅವನ ಮಕ್ಕಳು ಹಂಚಿಕೊಂಡು ತಿನ್ನಲಿ ಅಂತಾ ಹೇಳಿದ್ದರು ಎಂದರೆ ಸರಿ. ಸುಭಾಷಚಂದ್ರರವರ ತಂದೆ ಗುಂಡಪ್ಪರವರು ತೀರಿಕೊಂಡ ನಂತರ ಅವರ ಎಲ್ಲಾ ಮಕ್ಕಳು ನನ್ನ ಸಮಕ್ಷಮದಲ್ಲಿ ಪಾಲು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ಸುಭಾಷಚಂದ್ರರವರಿಗೆ ರೂ.100 ಕಿಂತ ಕಡಿಮೆ ಸಂಬಳ ಇತ್ತು ಎಂದರೆ ಸರಿ. ಸುಭಾಷಚಂದ್ರರವರ ಸರಕಾರಿ ನೌಕರಿಯಲ್ಲಿ ಇದ್ದು ಹೊಲ ಮನೆ ತನ್ನ ಹೆಸರಿಗೆ ಹೇಗೆ ಮಾಡಿಕೊಳ್ಳಬೇಕು ಎಂದು ಅವರಿಗೆ ಗೊತ್ತಿತ್ತು ಎಂದರೆ ಸರಿ. ಹಿಂದಿನ ಕಾಲದಲ್ಲಿ ಕಡಿಮೆ ಸಂಬಂಳ ಇದ್ದುದ್ದರಿಂದ ಹೊಲ ಮನೆ ಇದ್ದರೆ ಚನ್ನಾಗಿ ಬದುಕಬಹುದಾಗಿತ್ತು ಎಂದರೆ ಸರಿ. ಸುಭಾಷಚಂದ್ರರವರ ತಂದೆ ಗುಂಡಪ್ಪರವರು ಹೇಳಿದ್ದರಿಂದ ನನ್ನಿಂದ ಹಾಗೂ ನೀಲಮ್ಮನ ಹತ್ತಿರ ಜಮೀನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ಸುಭಾಷಚಂದ್ರರವರು ಬಂದಿದ್ದರು ಎಂದು ಹೇಳುತ್ತಾರೆ. ಸುಭಾಷಚಂದ್ರರವರ ತಂದೆ ಗುಂಡಪ್ಪರವರು ಹೇಳಿದ್ದರಿಂದ ನನ್ನಿಂದ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರ ಹತ್ತಿರ ದುಡಿದ ಹಣ ಇದೆ ಖರೀದಿ ಮಾಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಹಿಂದಿನ ಕಾಲದಲ್ಲಿ ಕಡಿಮೆ ಸಂಬಳ ಇದ್ದುದ್ದರಿಂದ ಸುಭಾಷಚಂದ್ರರವರ ಹತ್ತಿರ ಖರೀದಿ ಮಾಡುವಷ್ಟು ಹಣ ಇರಲಿಲ್ಲ ಎಂದರೆ ಸಾಕ್ಷಿ ಅವನ ಕುಟುಂಬದಿಂದ ಬಂದ ಹಣ ಇದೆ ಖರೀದಿ ಮಾಡುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸುಭಾಷಚಂದ್ರರ ಕುಟುಂಬ ಅಂದರೆ ಸುಭಮ್ಮ, ಚಂದ್ರಕಾಂತ, ಶಾಂತಪ್ಪ ಮತ್ತು ಬಸವರಾಜ ಮತ್ತು ಶಾಮರಾವ ಎಂದರೆ ಸಾಕ್ಷಿ ಎಲ್ಲರೂ ತಲಾಟಿಯವರ ಕುಟುಂಬದವರು

ಎಂದು ಹೇಳುತ್ತಾರೆ. ನನಗೆ ಏನು ಗೊತ್ತಿಲ್ಲದಿದ್ದರು ಸಹ ಸುಭಾಷಚಂದ್ರರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ 13 ರ ಪರ ಶ್ರೀ. ಎಮ.ಎಸ.ಎಸ ವಕೀಲರಿಂದ :**

1. ಸರ್ವೆ ನಂಬರ 227 ಜಮೀನನ್ನು ಖರೀದಿ ಮಾಡಿದ ನಂತರ ಗುಂಡಪ್ಪನ ಎಲ್ಲಾ ಮಕ್ಕಳು ಒಟ್ಟು ಕುಟುಂಬದ ನಾತೆ ಇಂದ ಅದನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಸುಮಾರು 40-50 ವರ್ಷಗಳ ಹಿಂದೆ ನೌಕರರಿಗೆ ಅಷ್ಟೊಂದು ದುಡಿಮೆ ಇರಲಿಲ್ಲ ಒಕ್ಕಲುತನ ಮಾಡುವವರಿಗೆ ಒಳ್ಳೆಯ ಆದಾಯ ಇತ್ತು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಗುಂಡಪ್ಪರವರ 45 ವರ್ಷಗಳ ಹಿಂದೆ ಖರೀದಿ ಮಾಡಿದ ಜಮೀನನ್ನು ಎಲ್ಲಾ ಕುಟುಂಬದವರು ಒಟ್ಟು ಕುಟುಂಬದ ನಾತೇ ಇಂದ ಉಳಿಮೆ ಮಾಡುತ್ತಿದ್ದರು ಎಂದರೆ ಸರಿ. ಸುಭಾಷಚಂದ್ರರವರಿಗೆ ಸಂತ ದುಡಿಮೆ ಇತ್ತು ಎಂಬ ಬಗ್ಗೆ ನಾನು ಅವರ ಬ್ಯಾಂಕ ಪುಸ್ತಕ ಅಥವಾ ಬೇರೆ ದಾಖಲೆ ನೋಡಿಲ್ಲ. ಸುಭಾಷಚಂದ್ರರು ಹೇಳಿಕೊಟ್ಟಷ್ಟು ನಾನು ಹೇಳುತ್ತಿದ್ದೇನೆ ಎಂದರೆ ಸರಿ.

**(ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**( ಶ್ರೀ ಎನ ಸಿ ಎಚ ವಾದಿ 9 ರಿಂದ 11 ಪರ ವಕೀಲರು ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.